# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂ. | 1146 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 21.08.2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖಾವತಿಯಿಂದ ಸಿಎಲ್–7 ಪರವಾನಗಿಯನ್ನು ಪಡೆಯಲು ಇರುವ ನೀತಿ ನಿಯಮಗಳೇನು; ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಬಾರಿ ನೀತಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ; | ಸಿಎಲ್–7 ಪರವಾನಗಿಯನ್ನು ನೀಡಲು ಇರುವ ನಿಯಮಗಳ ಮಾನದಂಡವನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.<br>ಕಳೆದ 10 ವರ್ಷಗಳಲ್ಲಿ 02 ಬಾರಿ ತಿದ್ದುಪಡಿ ಮಾಡಲಾಗಿರುತ್ತದೆ. |
| ಆ) | ರಾಜ್ಯಾದ್ಯಂತ ಪ್ರವಾಸೋದ್ಯಮ ಹೆಸರಿನಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಮದ್ಯ ಮಾರಾಟಕ್ಕೆ ಅನುಮತಿ ನೀಡಲಾಗುತ್ತಿದೆಯೇ; ಹಾಗೂ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಿಎಲ್–7 (ಬೋರ್ಡಿಂಗ್ & ಲಾಡ್ಜಿಂಗ್ ಸನ್ನದು) ಸನ್ನದನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3(7) ಮತ್ತು 5 ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಹೊಸದಾಗಿ ಸಿಎಲ್–7 ಸನ್ನದನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸನ್ನದನ್ನು ತೆರೆಯಲು ಅನುಮತಿ ನೀಡಲಾಗಿರುವುದಿಲ್ಲ. ಅಬಕಾರಿ ಕಾಯ್ದೆ ಹಾಗೂ ನಿಯಮಗಳ ವಿರುದ್ಧ ನಿಯಮ ಬಾಹಿರವಾಗಿ ಸನ್ನದು ನಡೆಸಲು ಅನುಮತಿ ನೀಡುವ ಅಧಿಕಾರಿ / ನೌಕರರುಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುತ್ತದೆ. |

| | | |
|---|---|---|
| ಇ) | ಕಳೆದ 10 ವರ್ಷದ ಅವಧಿಯಲ್ಲಿ ರಾಜ್ಯಾದ್ಯಂತ ಎಷ್ಟು ಸಿಎಲ್–7 ಪರವಾನಿಗೆಯನ್ನು ನೀಡಲಾಗಿದೆ ಹಾಗೂ ಸರ್ಕಾರ ಸಿಎಲ್–7 ನೀಡುವ ಉದ್ದೇಶವೇನು; (ಜಿಲ್ಲಾವಾರು ವಿವರ ನೀಡುವುದು) | ಕಳೆದ 10 ವರ್ಷಗಳಿಂದ ಇಲ್ಲಿಯವರೆಗೆ ಅಂದರೆ ಅಬಕಾರಿ ಸಾಲಿನ 2014–15ನೇ ಅಬಕಾರಿ ಸಾಲಿನಿಂದ 2024–25 ನೇ ಸಾಲಿನ ಜೂನ್–2025ರ ಅಂತ್ಯದವರೆಗೆ ಮಂಜೂರು ಮಾಡಿರುವ ಸನ್ನದುಗಳ ಮಾಹಿತಿಯನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ.<br><br>ಸಿಎಲ್–7 ಸನ್ನದು (Hotel and Boarding House License) ಗಳನ್ನು ಪ್ರವಾಸೋದ್ಯಮ ದೃಷ್ಟಿಯಿಂದ ಲಾಡ್ಜ್‌ನಲ್ಲಿ ತಂಗುವ ಗ್ರಾಹಕರಿಗೆ ಹಾಗೂ ಅವರ ಅತಿಥಿಗಳಿಗೆ ಹಾಗೂ ರೆಸ್ಟೋರೆಂಟ್ ಗೆ ಬರುವ ಸಾಂದರ್ಭಿಕ ಸಂದರ್ಶಕರು (Casual Visitors) ಗಳಿಗೆ ಮದ್ಯವನ್ನು ಊಟದೊಂದಿಗೆ ಸರಬರಾಜು ಮಾಡಲು ಮಂಜೂರು ಮಾಡಲಾಗುತ್ತಿದೆ. |
| ಈ) | ಸಿಎಲ್–7 ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ನಿಯಮದಂತೆ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆಯಬೇಕು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕೆಂಬ ಕಡ್ಡಾಯವಾಗಿದೆಯೇ; | ಸುತ್ತೋಲೆ ದಿನಾಂಕ:01–12–2020ರಲ್ಲಿ ಸಿಎಲ್–7 ಸನ್ನದು ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸೂಚನೆಯನ್ನು ನೀಡಲಾಗಿದ್ದು ಸದರಿ ಸುತ್ತೋಲೆಯಲ್ಲಿ 1) ಉದ್ದೇಶಿತ ಸನ್ನದು ಕಟ್ಟಡವು ಸಂಬಂಧಪಟ್ಟ ಪ್ರಾಧಿಕಾರದಿಂದ ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆದಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು 2) ಉದ್ದೇಶಿತ ಸನ್ನದು ಕಟ್ಟಡದಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು 3) ಉದ್ದೇಶಿತ ಸನ್ನದು ಕಟ್ಟಡದಲ್ಲಿ ಅಗ್ನಿ ಶಾಮಕ ಸೌಲಭ್ಯವನ್ನು ಒದಗಿಸಲಾಗಿದೆಯೇ ಎಂಬ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಎಂದು ತಿಳಿಸಲಾಗಿರುತ್ತದೆ.<br><br>ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸಲಾಗುತ್ತಿದೆ.<br><br>ಗ್ರಾಹಕರ ಸುರಕ್ಷತೆ ಹಿತದೃಷ್ಟಿಯಿಂದ ಸಿಎಲ್–7 ಸನ್ನದು ಮಂಜೂರು ಮಾಡುವ ಪೂರ್ವದಲ್ಲಿ ಎಲ್ಲಾ ಮೂಲಭೂತ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕಾಗಿರುತ್ತದೆ. ಈ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಸುತ್ತೋಲೆ ಮೂಲಕ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಅಗತ್ಯ ಸೂಚನೆಯನ್ನು ನೀಡಲಾಗಿದೆ. |

| | | |
|---|---|---|
| ಉ) | ಹಾಗಿದ್ದಲ್ಲಿ ನಿಯಮದಂತೆ ನಡೆಯುತ್ತಿರುವ ಹಾಗೂ ನಿಯಮ ಉಲ್ಲಂಘಿಸಿರುವ ಮತ್ತು ಪರವಾನಗಿಯನ್ನು ಪಡೆಯದೆ ಕಳ್ಳ ಮಾರ್ಗದಿಂದ ವ್ಯಾಪಾರ ನಡೆಸುತ್ತಿರುವವರ ಸಂಖ್ಯೆ ಎಷ್ಟು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಹೊಸದಾಗಿ ಮಂಜೂರು ಮಾಡಿದ ಹಾಗೂ ನವೀಕರಣಗೊಂಡ ಸಿಎಲ್–7 ಸನ್ನದುಗಳು ಅಬಕಾರಿ ಕಾಯ್ದೆ / ನಿಯಮಗಳಲ್ಲಿ ತಿಳಿಸಲಾಗಿರುವಂತೆ ಹಾಗೂ ಸಿಎಲ್–7 ಸನ್ನದಿಗೆ ನಿರ್ಧಿಷ್ಟಪಡಿಸಿದ ಸನ್ನದು ಷರತ್ತುಗಳಂತೆ ಮಾತ್ರವೇ ಕಾರ್ಯನಿರ್ವಹಿಸಬೇಕಿರುತ್ತದೆ.<br><br>ರಾಜ್ಯವ್ಯಾಪಿ ಕಾರ್ಯನಿರ್ವಹಿಸುತ್ತಿರುವ ಸಿಎಲ್–7 ಸನ್ನದುಗಳ ವಿರುದ್ಧ ಸನ್ನದು ಷರತ್ತು ಉಲ್ಲಂಘನೆಗಾಗಿ 2022–23ನೇ ಸಾಲಿನಲ್ಲಿ 3274 ಪ್ರಕರಣಗಳನ್ನು, 2023–24ನೇ ಸಾಲಿನಲ್ಲಿ 3980 ಪ್ರಕರಣಗಳನ್ನು ಮತ್ತು 2024–25 ನೇ ಸಾಲಿನಲ್ಲಿ 4116 ಪ್ರಕರಣಗಳನ್ನು ಒಟ್ಟಾರೆ 11370 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಜಿಲ್ಲಾವಾರು ದಾಖಲಿಸಲಾದ ಪ್ರಕರಣಗಳ ವಿವರವನ್ನು **ಅನುಬಂಧ–3** ರಲ್ಲಿ ನೀಡಲಾಗಿದೆ.<br><br>ಸಿಎಲ್–7 ಸನ್ನದು ಮಂಜೂರಾತಿಯನ್ನು ಪಡೆಯದೇ ಕಳ್ಳಮಾರ್ಗದಿಂದ ಸಿಎಲ್–7 ಸನ್ನದಿನಂತೆ ವ್ಯಾಪಾರ ನಡೆಸುತ್ತಿರುವ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |

**ಆಇ 68 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**

**ಅನುಬಂಧ-1**

**ಸಿಎಲ್-7 ಪರವಾನಗಿಗಳನ್ನು ಈ ಕೆಳಕಂಡ ನಿಯಮ/ಮಾನದಂಡಗಳನ್ನು ಪಾಲಿಸಿ ನೀಡಲಾಗುತ್ತಿದೆ.**

- ಸಿಎಲ್-7 (ಬೋರ್ಡಿಂಗ್ & ಲಾಡ್ಜಿಂಗ್ ಸನ್ನದು) ಸನ್ನದನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3(7) ಮತ್ತು 5 ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಹೊಸದಾಗಿ ಸಿಎಲ್-7 ಸನ್ನದು ಮಂಜೂರು ಮಾಡಲಾಗುತ್ತಿದೆ. ಸಿಎಲ್-7 ಸನ್ನದುಗಳಲ್ಲಿ ಲಾಡ್ಜ್‌ನಲ್ಲಿ ತಂಗುವ ಗ್ರಾಹಕರಿಗೆ ಹಾಗೂ ಅವರ ಅತಿಥಿಗಳಿಗೆ ಹಾಗೂ ರೆಸ್ಟೋರೆಂಟ್‌ಗೆ ಬರುವ ಸಾಂದರ್ಭಿಕ ಸಂದರ್ಶಕರುಗಳಿಗೆ ಊಟದೊಂದಿಗೆ ಮದ್ಯವನ್ನು ಮಾರಾಟ ಮಾಡಲು ಅವಕಾಶವಿರುತ್ತದೆ.

- ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-8, 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಪಾವತಿಸತಕ್ಕದ್ದು ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು ಹಾಗೂ ಪತ್ರಾಂಕಿತ ಅಧಿಕಾರಿಗಳ ಕೇಂದ್ರ/ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:12164-12166/2016ರ ದಿನಾಂಕ:31-03-2017ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಮತ್ತು 20,000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.

- ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017ರಲ್ಲಿ ದಿನಾಂಕ: 11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

- 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ

ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ. ಮುಂದುವರೆದು, ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ.

- ಅಧಿಸೂಚನೆ ದಿನಾಂಕ:16-08-2024ರಲ್ಲಿ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ಉಪ ನಿಯಮ(1) ರಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ 6A ಮತ್ತು ನಮೂನೆ-7 ನಲ್ಲಿ ಮಂಜೂರು ಮಾಡಲಾಗಿರುವ ಹೊಸ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿದ್ದುಪಡಿ ತರಲಾಗಿರುತ್ತದೆ. ಹಾಗೂ ಇದೇ ಉಪ ನಿಯಮ (2) ಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪ ನಿಯಮ (1) ರಲ್ಲಿರುವ ಯಾವುದೂ, ಮಹಾನಗರ ಮಿತಿಯೊಳಗೆ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲವೆಂದು ಹಾಗೂ ಮಹಾನಗರ ಮಿತಿಯೊಳಗೆ ಅಸ್ತಿತ್ವದಲ್ಲಿರುವ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ಸನ್ನದುಗಳಿಗೆ ಅನ್ವಯಿಸುವುದಿಲ್ಲ ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ ಎಂದು ತಿದ್ದುಪಡಿ ತರಲಾಗಿದೆ.

- ಸಿಎಲ್-7 ಮಂಜೂರು ಮಾಡಲು ಬೃಹತ್ / ಮಹಾನಗರ ಪಾಲಿಕೆಗಳಲ್ಲಿ 15 ಡಬಲ್ ರೂಂ ಹಾಗೂ ಇತರೆ ಪ್ರದೇಶದಲ್ಲಿ 10 ಡಬಲ್ ರೂಂ ಅನ್ನು ಕಟ್ಟಡದಲ್ಲಿ ಹೊಂದಿರಬೇಕು.

- ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ.

- ಈ ಮೂಲ ಸೌಕರ್ಯಗಳ ಪೈಕಿ ಸಿಎಲ್-7 ಸನ್ನದಿನ ಕಟ್ಟಡದಲ್ಲಿ ಎರಡು ಹಾಸಿಗೆಗಳಿರುವ (Double Bedded) ಹಾಗೂ ಶೌಚಾಲಯದ ವ್ಯವಸ್ಥೆಯಿರುವ ಕೊಠಡಿಗಳ ಬಗ್ಗೆ ಹಾಗೂ ಸನ್ನದಿನ ಆವರಣದಲ್ಲಿ ವಾಹನಗಳ ನಿಲುಗಡೆಗಾಗಿ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ.

- ಸನ್ನದು ಮಂಜೂರಾತಿ ಸಂಬಂಧ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಪೂರ್ವದಲ್ಲಿಯೇ ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಿರುವ ಎಲ್ಲಾ ವಿವರಗಳ ಬಗ್ಗೆ ವಿಚಾರಣೆ ಮಾಡುವ ವಿವೇಚನಾಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿದ್ದು, ಸನ್ನದನ್ನು ನೀಡುವ ಸಂಬಂಧ ಯಾವುದೇ ಆಕ್ಷೇಪಣೆಗಳು ಇಲ್ಲದಿರುವ ಬಗ್ಗೆ ಮನದಟ್ಟು ಮಾಡಿಕೊಂಡ ನಂತರವೇ ಸನ್ನದು ಮಂಜೂರಾತಿಗೆ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಸದರಿಯವರ ಶಿಫಾರಸ್ಸನ್ನು ಪರಿಗಣಿಸಿ, ಸನ್ನದು

ಮಂಜೂರಾತಿಗೆ ಪೂರ್ವಾನುಮತಿ ನೀಡುವ ಅಧಿಕಾರವು ಅಬಕಾರಿ ಆಯುಕ್ತರಿಗೆ ದತ್ತವಾಗಿದ್ದು, ಪೂರ್ವಾನುಮತಿ ದೊರೆತ ನಂತರದಲ್ಲಿ ಸನ್ನದನ್ನು ಮಂಜೂರು ಮಾಡುವ ವಿವೇಚನಾಧಿಕಾರವು ಸಹ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುತ್ತದೆ.

ಆಇ 68 ಇಎಲ್‌ಕ್ಯೂ 2025

## ಅನುಬಂಧ-2

### ಕಳೆದ 10 ವರ್ಷಗಳಲ್ಲಿ ಮಂಜೂರು ಮಾಡಿರುವ ಸಿಎಲ್-7 ಸನ್ನದುಗಳ ವಿವರ (ಅಬಕಾರಿ ವರ್ಷ ಜುಲೈನಿಂದ ಜೂನ್ ರವರೆಗೆ)

| ಕ್ರ. ಸಂ. | ಜಿಲ್ಲೆ | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 | 2024-25 | ಒಟ್ಟು |
|---|---|---|---|---|---|---|---|---|---|---|---|---|---|
| 1 | ಬೆಂಗಳೂರು ನಗರ ಜಿಲ್ಲೆ - 1 | 1 | 1 | 2 | 6 | 2 | 8 | 6 | 7 | 20 | 19 | 24 | 96 |
| 2 | ಬೆಂಗಳೂರು ನಗರ ಜಿಲ್ಲೆ - 2 | 0 | 0 | 0 | 0 | 2 | 4 | 11 | 20 | 25 | 28 | 31 | 121 |
| 3 | ಬೆಂಗಳೂರು ನಗರ ಜಿಲ್ಲೆ - 3 | 0 | 0 | 0 | 0 | 3 | 16 | 12 | 25 | 19 | 22 | 32 | 129 |
| 4 | ಬೆಂಗಳೂರು ನಗರ ಜಿಲ್ಲೆ - 4 | 2 | 1 | 1 | 0 | 4 | 1 | 6 | 1 | 2 | 3 | 0 | 21 |
| 5 | ಬೆಂಗಳೂರು ನಗರ ಜಿಲ್ಲೆ - 5 | 1 | 1 | 1 | 0 | 0 | 7 | 0 | 4 | 5 | 8 | 10 | 37 |
| 6 | ಬೆಂಗಳೂರು ನಗರ ಜಿಲ್ಲೆ - 6 | 0 | 1 | 0 | 5 | 4 | 9 | 4 | 16 | 10 | 8 | 8 | 65 |
| 7 | ಬೆಂಗಳೂರು ನಗರ ಜಿಲ್ಲೆ - 7 | 0 | 3 | 1 | 0 | 1 | 3 | 0 | 3 | 8 | 4 | 13 | 36 |
| 8 | ಬೆಂಗಳೂರು ನಗರ ಜಿಲ್ಲೆ - 8 | 0 | 0 | 1 | 1 | 3 | 10 | 13 | 24 | 22 | 25 | 41 | 140 |
| 9 | ಕೋಲಾರ | 1 | 3 | 0 | 4 | 5 | 4 | 10 | 18 | 24 | 21 | 27 | 117 |
| 10 | ಬೆಂಗಳೂರು ಗ್ರಾಮಾಂತರ | 0 | 1 | 1 | 4 | 13 | 11 | 4 | 4 | 9 | 35 | 49 | 131 |
| 11 | ಚಿಕ್ಕಬಳ್ಳಾಪುರ | 0 | 2 | 0 | 0 | 1 | 1 | 2 | 12 | 12 | 16 | 25 | 71 |
| 12 | ರಾಮನಗರ | 0 | 1 | 0 | 0 | 1 | 1 | 2 | 7 | 3 | 11 | 21 | 47 |
| 13 | ತುಮಕೂರು | 1 | 6 | 0 | 3 | 2 | 1 | 11 | 17 | 31 | 17 | 36 | 125 |
| 14 | ಬಾಗಲಕೋಟೆ | 2 | 1 | 0 | 1 | 4 | 2 | 4 | 2 | 8 | 4 | 5 | 33 |
| 15 | ಬೆಳಗಾವಿ ಉತ್ತರ | 6 | 6 | 3 | 7 | 6 | 3 | 2 | 5 | 6 | 5 | 2 | 51 |
| 16 | ಬೆಳಗಾವಿ ದಕ್ಷಿಣ | 2 | 3 | 2 | 2 | 3 | 4 | 2 | 2 | 6 | 4 | 5 | 35 |
| 17 | ವಿಜಯಪುರ | 1 | 1 | 2 | 2 | 6 | 3 | 5 | 2 | 2 | 6 | 3 | 33 |
| 18 | ಧಾರವಾಡ | 2 | 3 | 3 | 5 | 2 | 1 | 2 | 3 | 1 | 3 | 7 | 32 |
| 19 | ಚಿಕ್ಕಮಗಳೂರು | 2 | 1 | 0 | 7 | 7 | 2 | 7 | 4 | 2 | 6 | 10 | 48 |
| 20 | ದಾವಣಗೆರೆ | 1 | 0 | 1 | 1 | 4 | 2 | 0 | 0 | 0 | 2 | 2 | 13 |
| 21 | ಹಾವೇರಿ | 3 | 4 | 0 | 2 | 2 | 2 | 3 | 2 | 3 | 2 | 5 | 28 |
| 22 | ಶಿವಮೊಗ್ಗ | 1 | 1 | 0 | 0 | 7 | 7 | 7 | 2 | 19 | 10 | 7 | 61 |
| 23 | ಬಳ್ಳಾರಿ | 1 | 2 | 2 | 3 | 0 | 1 | 1 | 2 | 6 | 0 | 3 | 21 |
| 24 | ವಿಜಯನಗರ | 1 | 1 | 0 | 0 | 3 | 0 | 0 | 0 | 4 | 2 | 2 | 13 |
| 25 | ಚಿತ್ರದುರ್ಗ | 0 | 1 | 0 | 2 | 3 | 2 | 0 | 5 | 1 | 1 | 8 | 23 |
| 26 | ಗದಗ | 1 | 5 | 2 | 1 | 4 | 5 | 2 | 3 | 5 | 2 | 5 | 35 |
| 27 | ಕೊಪ್ಪಳ | 3 | 2 | 1 | 1 | 5 | 6 | 3 | 4 | 7 | 3 | 3 | 38 |
| 28 | ಬೀದರ್ | 2 | 3 | 0 | 5 | 6 | 3 | 2 | 5 | 8 | 4 | 2 | 40 |
| 29 | ಕಲಬುರಗಿ | 3 | 1 | 2 | 3 | 10 | 14 | 1 | 10 | 4 | 8 | 7 | 63 |
| 30 | ರಾಯಚೂರು | 0 | 2 | 0 | 1 | 5 | 4 | 8 | 4 | 8 | 7 | 7 | 46 |
| 31 | ಯಾದಗಿರಿ | 2 | 1 | 0 | 1 | 3 | 2 | 3 | 2 | 1 | 3 | 3 | 21 |
| 32 | ದಕ್ಷಿಣ ಕನ್ನಡ | 4 | 8 | 2 | 4 | 8 | 10 | 11 | 6 | 10 | 20 | 11 | 94 |
| 33 | ಕೊಡಗು | 4 | 2 | 0 | 0 | 2 | 1 | 1 | 4 | 6 | 4 | 9 | 33 |
| 34 | ಉಡುಪಿ | 5 | 7 | 2 | 7 | 8 | 2 | 15 | 5 | 11 | 4 | 11 | 77 |
| 35 | ಉತ್ತರ ಕನ್ನಡ | 2 | 0 | 0 | 2 | 3 | 1 | 2 | 3 | 6 | 2 | 2 | 23 |
| 36 | ಚಾಮರಾಜನಗರ | 1 | 1 | 0 | 0 | 1 | 2 | 1 | 4 | 2 | 5 | 6 | 23 |
| 37 | ಹಾಸನ | 1 | 5 | 11 | 3 | 0 | 22 | 33 | 62 | 57 | 16 | 34 | 244 |
| 38 | ಮಂಡ್ಯ | 2 | 1 | 4 | 2 | 5 | 7 | 9 | 11 | 18 | 15 | 13 | 87 |
| 39 | ಮೈಸೂರು ನಗರ | 2 | 1 | 2 | 3 | 2 | 5 | 6 | 11 | 7 | 6 | 9 | 54 |
| 40 | ಮೈಸೂರು ಗ್ರಾಮಾಂತರ | 1 | 5 | 3 | 8 | 7 | 8 | 3 | 18 | 9 | 20 | 18 | 100 |
| ರಾಜ್ಯದ ಒಟ್ಟು | | 61 | 88 | 49 | 96 | 157 | 197 | 214 | 339 | 407 | 381 | 516 | 2505 |

ಆಇ 68 ಇಎಲ್‌ಕ್ಯೂ 2025

## ಅನುಬಂಧ-3

**ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ ಸಿಎಲ್-7 ಸನ್ನದುಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ದಾಖಲಿಸಿರುವ ಪ್ರಕರಣಗಳ ಜಿಲ್ಲಾವಾರು ವಿವರ (ಜೂನ್ ರಿಂದ ಜುಲೈ ವರೆಗೆ)**

| ಕ್ರ ಸಂ | ಜಿಲ್ಲೆ | 2022-23 | 2023-24 | 2024-25 | TOTAL |
|---|---|---|---|---|---|
| 1 | Bagalkot | 90 | 101 | 95 | 286 |
| 2 | Belagavi North | 50 | 69 | 67 | 186 |
| 3 | Belagavi South | 36 | 57 | 47 | 140 |
| 4 | Dharwad | 47 | 45 | 49 | 141 |
| 5 | Vijayapura | 53 | 53 | 49 | 155 |
| 6 | BUD-01 | 51 | 68 | 111 | 230 |
| 7 | BUD-02 | 150 | 158 | 199 | 507 |
| 8 | BUD-03 | 138 | 179 | 137 | 454 |
| 9 | BUD-04 | 66 | 70 | 57 | 193 |
| 10 | Bengaluru Rural | 81 | 87 | 165 | 333 |
| 11 | Chikkaballapura | 34 | 52 | 93 | 179 |
| 12 | Bengaluru South | 27 | 31 | 54 | 112 |
| 13 | Tumakuru | 74 | 181 | 206 | 461 |
| 14 | BUD-05 | 29 | 41 | 68 | 138 |
| 15 | BUD-06 | 68 | 110 | 132 | 310 |
| 16 | BUD-07 | 31 | 35 | 48 | 114 |
| 17 | BUD-08 | 183 | 181 | 199 | 563 |
| 18 | Kolar | 175 | 178 | 250 | 603 |
| 19 | Chikkamagaluru | 46 | 66 | 52 | 164 |
| 20 | Davanagere | 27 | 23 | 24 | 74 |
| 21 | Haveri | 32 | 49 | 36 | 117 |
| 22 | Shivamogga | 43 | 84 | 75 | 202 |
| 23 | Ballari | 63 | 51 | 60 | 174 |
| 24 | Chitradurga | 46 | 41 | 42 | 129 |
| 25 | Gadag | 98 | 111 | 98 | 307 |
| 26 | Koppal | 125 | 122 | 89 | 336 |
| 27 | Vijayanagara | 2 | 16 | 17 | 35 |
| 28 | Bidar | 66 | 71 | 60 | 197 |
| 29 | Kalaburagi | 90 | 135 | 97 | 322 |
| 30 | Raichur | 49 | 64 | 45 | 158 |
| 31 | Yadgir | 35 | 50 | 28 | 113 |
| 32 | Dakshina Kannada | 119 | 149 | 154 | 422 |
| 33 | Kodagu | 46 | 71 | 65 | 182 |
| 34 | Udupi | 85 | 111 | 132 | 328 |
| 35 | Uttara Kannada | 21 | 45 | 23 | 89 |
| 36 | Chamarajanagara | 71 | 52 | 80 | 203 |
| 37 | Hassan | 331 | 381 | 350 | 1062 |
| 38 | Mandya | 139 | 177 | 198 | 514 |
| 39 | Mysuru | 144 | 158 | 114 | 416 |
| 40 | Mysuru Rural | 213 | 257 | 251 | 721 |
| **ಒಟ್ಟು** | | **3274** | **3980** | **4116** | **11370** |

**ಆಇ 68 ಇಎಲ್‌ಕ್ಯೂ, 2025**